# ಚೋರನಿಗೆ ಒಲಿದ ಶ್ರೀಕೃಷ್ಣ



ಒಬ್ಬ ಧನಿಕನ ಮನೆಯಲ್ಲಿ ಶ್ರೀಮದ್ ಭಾಗವತದ ಪ್ರವಚನ ನಡೆಯುತ್ತಿತ್ತು. ಆಗ ಒಬ್ಬ ಕಳ್ಳ ಆ ಧನಿಕನ ಮನೆಗೆ ನುಗ್ಗಿದ. ಒಂದು ಮೂಲೆಯಲ್ಲಿ ಅಡಗಿ ಕುಳಿತು, ಭಾಗವತದ ಕಥೆ ಕೇಳತೊಡಗಿದ. ಪ್ರವಚನಕಾರರು, ತಾಯಿ ಯಶೋದೆ ಪುಟ್ಟ ಕೃಷ್ಣನಿಗೆ ಆಭರಣಗಳನ್ನು ತೊಡಿಸಿ, ಗೋವುಗಳೊಂದಿಗೆ ಕಳುಹಿಸುತ್ತಿದ್ದ ವಿಷಯವನ್ನು ವರ್ಣಿಸುತ್ತಿದ್ದರು.

ಕಳ್ಳ ಆ ವರ್ಣನೆಗಳನ್ನೆಲ್ಲ ಕೇಳುತ್ತಿದ್ದ. 'ಹೇಗಾದರೂ ಆ ಹುಡುಗನನ್ನು ಹುಡುಕಬೇಕು. ಅವನ ಆಭರಣಗಳನ್ನೆಲ್ಲಾ ಕದಿಯಬೇಕು. ಆಗ ಪ್ರತಿನಿತ್ಯ ಕಳ್ಳತನ ಮಾಡುವ ಕಷ್ಟ ತಪ್ಪುತ್ತದೆ' ಎಂದು ಯೋಚಿಸಿದ. ಭಾಗವತದ ಪ್ರವಚನ ಮುಗಿಯುವವರೆಗೂ ಅಲ್ಲಿಯೇ ಇದ್ದು, ಅನಂತರ ಅಲ್ಲಿಂದ ತೆರಳಿದ. ಪ್ರವಚನಾಕರರೂ ಮನೆಯತ್ತ ಹೊರಟರು. ಕಳ್ಳ ಅವರನ್ನು ಹಿಂಬಾಲಿಸಿದ. ಕಳ್ಳನನ್ನು ಕಂಡ ಅವರಿಗೆ, ಪ್ರವಚನದಲ್ಲಿ ದೊರೆತ ಅಲ್ಪ ದಕ್ಷಿಣೆಯನ್ನೂ ಕಳೆದುಕೊಳ್ಳುವ ಭಯ ಉಂಟಾಯಿತು. ಆತನನ್ನು ನೋಡುತ್ತ, ''ನನ್ನಲ್ಲಿ ಏನೂ ಇಲ್ಲ'' ಎಂದು ಬಡಬಡಿಸಿದರು. ಆಗ ಕಳ್ಳ – ''ಸ್ವಾಮಿ! ನನಗದೆಲ್ಲ ಏನೂ ಬೇಡ. ನೀವು ವರ್ಣಿಸಿದ ಆ ಬಾಲಕೃಷ್ಣ ಎಲ್ಲಿ ಸಿಗುತ್ತಾನೆ? ಆ ಸ್ಥಳ ತಿಳಿಸಿ. ನಾನು ಅಲ್ಲಿಗೆ ಹೋಗಬೇಕು'' ಎಂದ.

ಆಗ ಅವರು – ''ವೃಂದಾವನದಲ್ಲಿ ಯಮುನಾ ನದಿಯ ದಡದಲ್ಲಿ ಇಬ್ಬರು ಬಾಲಕರು, ಗೋವುಗಳನ್ನು ಮೇಯಿಸುತ್ತಿರುತ್ತಾರೆ. ಒಬ್ಬ ಬೆಳ್ಳಗಿದ್ದಾನೆ, ಮತ್ತೊಬ್ಬ ಕಪ್ಪಗಿದ್ದಾನೆ. ಕಪ್ಪು ಹುಡುಗನ ಕೈಯಲ್ಲಿ ಒಂದು ಕೊಳಲು ಹಾಗೂ ತಲೆಯ ಮೇಲೊಂದು ನವಿಲುಗರಿ ಇದೆ. ಅವನೇ ಶ್ರೀಕೃಷ್ಣ'' ಎಂದರು. ಅವರ ಮಾತನ್ನು ನಂಬಿದ ಕಳ್ಳ , ಕೂಡಲೇ ವೃಂದಾವನದ ಕಡೆಗೆ ತೆರಳಿದ. ಅವರು ಹೇಳಿದ ಆ ಸ್ಥಳವನ್ನು ಹುಡುಕಿದ. ಅಲ್ಲಿಯೇ ಇದ್ದ ಮರ ಹತ್ತಿ ಕುಳಿತು ಹುಡುಗರಿಗಾಗಿ ರಾತ್ರಿಯೆಲ್ಲ ಕಾದು ಕುಳಿತ. ಮಾರನೇ ದಿನ ಸೂರ್ಯ ಉದಯಿಸಿದ. ಕೊಳಲಿನ ನಾದ ಕೇಳಿಸತೊಡಗಿತು. ಕಳ್ಳ , ಸ್ವಲ್ಪ ದೂರದಲ್ಲೇ ಅಮೂಲ್ಯವಾದ ಆಭರಣಗಳನ್ನು ಧರಿಸಿದ ಇಬ್ಬರು ಹುಡುಗರು ಬರುತ್ತಿರುವುದನ್ನು ನೋಡಿದ. ಮರದಿಂದ ಕೆಳಗಿಳಿದು, ಆ ಹುಡುಗರ ಬಳಿಗೆ ಹೋದ. ಬಾಲಕೃಷ್ಣನನ್ನು ಕಂಡು, ಮೈಮರೆತ. ತನಗೇ ಗೊತ್ತಿಲ್ಲದೇ ಕೈಗಳನ್ನೆತ್ತಿ ನಮಿಸಿದ. ಕಣ್ಣುಗಳಲ್ಲಿ ಆನಂದದ ಕಣ್ಣೀರು ತುಂಬಿತು.

''ನಿಲ್ಲು'' ಎನ್ನುತ್ತಾ ಶ್ರೀಕೃಷ್ಣನ ಕೈಹಿಡಿದು ಕೂಗಿದ. ಬಾಲಕನನ್ನು ಸ್ಪರ್ಶಿಸಿದ ಕೂಡಲೇ, ಅವನ ಎಲ್ಲಾ ಪಾಪಗಳು ನಾಶವಾದವು. ಭಕ್ತಿಪರವಶನಾಗಿ, ''ಯಾರು ನೀನು?'' ಎಂದು ಕೇಳಿದ. ಶ್ರೀಕೃಷ್ಣ, ಕಳ್ಳನನ್ನೇ ನೋಡುತ್ತಾ ''ನಿಮ್ಮನ್ನು ನೋಡುತ್ತಿದ್ದರೆ, ನನಗೆ ಭಯವಾಗುತ್ತಿದೆ. ದಯವಿಟ್ಟು ನನ್ನ ಕೈಬಿಡಿ'' ಎಂದ. ಆಗ ಕಳ್ಳ – ''ನಿನಗೆ ನನ್ನ ಕ್ರೂರ ಮುಖ ನೋಡಿ ಭಯವಾದರೆ, ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಳ್ಳುತ್ತೇನೆ. ಆದರೆ ನಿನ್ನ ಕೈಬಿಡಲು ಮಾತ್ರ ಹೇಳಬೇಡ'' ಎಂದ. ಆಗ ಕೃಷ್ಣ – ''ನನ್ನ ಕೈಬಿಡು, ನಾನೇ ನನ್ನ ಎಲ್ಲಾ ಆಭರಣಗಳನ್ನು ನಿನಗೆ ಕೊಡುತ್ತೇನೆ'' ಎಂದ. ಕಳ್ಳ – ''ನೀನು ಹೀಗೆ ನಿನ್ನ ಎಲ್ಲಾ ಆಭರಣಗಳನ್ನು ಕೊಟ್ಟರೆ, ನಿನ್ನ ತಾಯಿ ಬಯ್ಯುವುದಿಲ್ಲವೆ?'' ಎಂದ. ಕೃಷ್ಣ ನಗುತ್ತಾ – ''ಇಂಥ ಆಭರಣಗಳು ನನ್ನಲ್ಲಿ ತುಂಬಾ ಇವೆ, ಅದರ ಬಗ್ಗೆ ಚಿಂತೆ ಬೇಡ'' ಎಂದು ಹೇಳಿದ. ಹೀಗೆ ಹೇಳುತ್ತಿದ್ದಂತೆ, ಇಬ್ಬರೂ ಹುಡುಗರೂ ಅಲ್ಲಿಂದ ಮಾಯವಾದರು.

ಕಳ್ಳನ ಕೈಯಲ್ಲಿ ಆಭರಣಗಳಿರುವ ಚೀಲವೊಂದಿತ್ತು. ಕಳ್ಳ ಆ ಚೀಲದೊಡನೆ ಪ್ರವಚನಕಾರರ ಮನೆಗೆ ಬಂದ. ನಡೆದುದೆಲ್ಲವನ್ನೂ ವಿವರಿಸಿ ಹೇಳಿದ. ಅವರು ಆಶ್ಚರ್ಯದಿಂದ ಚೀಲವನ್ನು ಬಿಚ್ಚಿ ನೋಡಿದರು. ತಾನು ವರ್ಣಿಸಿದ್ದ ಆಭರಣಗಳು ಆ ಚೀಲದಲ್ಲಿದ್ದವು. ಅವುಗಳನ್ನು ನೋಡಿ ಆನಂದಬಾಷ್ಪಭರಿತರಾದರು. ಕಳ್ಳನನ್ನು ಕುರಿತು, ''ನನ್ನನ್ನೂ ಆ ಕಪ್ಪುಹುಡುಗನನ್ನು ನೋಡಿದ ಸ್ಥಳಕ್ಕೆ ಕರೆದುಕೊಂಡು ಹೋಗು'' ಎಂದರು. ಕಳ್ಳನೂ ಸಮ್ಮತಿಸಿ, ವೃಂದಾವನಕ್ಕೆ ಕರೆದೊಯ್ದು, ''ಇದೇ ಆ ಸ್ಥಳ'' ಎಂದು ತೋರಿಸಿದ. ಪ್ರವಚನಕಾರರಿಗೆ ಆ ಜಾಗದಲ್ಲಿ ಏನೂ ಕಾಣಲಿಲ್ಲ , ಯಾರೂ ಕಾಣಲಿಲ್ಲ. ಆಗ ಅವರು, ''ಹೇ ದೇವ! ಕಳ್ಳನಿಗೆ ಕಂಡವ, ನನಗೆ ಕಾಣಿಸಲಾರೆಯಾ?'' ಎಂದರು. ಆಗ ಒಂದು ಧ್ವನಿ ಕೇಳಿಸಿತು – **''ನೀನು ಭಾಗವತದ ಕಥೆಯನ್ನು, ಇತರ ಕಥೆಗಳಂತೆಯೇ ಓದಿ ಪ್ರವಚನ ಮಾಡುತ್ತಿದ್ದೆ. ಆದರೆ ಈ ಕಳ್ಳನಾದರೋ ಆ ಕಥೆಯನ್ನೆಲ್ಲ ಕೇಳಿ, ನಂಬಿ ನಡೆದ. ಅದನ್ನು ಒಪ್ಪಿಕೊಂಡು, ನನ್ನನ್ನು ನೋಡಲು ಬಂದ. ನನ್ನನ್ನು ನಂಬಿದವರಿಗೆ ನಾನು ಖಂಡಿತ ಕಾಣಿಸುವೆ. ನಂಬಿ ನಡೆದರೆ ನಿನ್ನೊಳಗೆ ನೆಲೆಸುವೆ. ನನ್ನ ಕಥೆಗಳನ್ನು ಶುಷ್ಕವಾಗಿ ಓದಿ, ಕೇಳಿ ಮರೆತುಬಿಡುವುದು ವ್ಯರ್ಥ ಕಾಲಹರಣ. ನಂಬಿ ನಡೆದಾಗಲೇ ಒಳಗಣ್ಣಿಂದ ನನ್ನನ್ನು ಕಾಣುವ ಭಾಗ್ಯ ಎಲ್ಲರಿಗೂ ಲಭಿಸುತ್ತದೆ.''** ದಿವ್ಯವಾದ ಧ್ವನಿಯನ್ನು ಕೇಳಿಸಿಕೊಂಡ ಅವರು, '**ಶ್ರೀಕೃಷ್ಣನನ್ನು ಕಂಡ ಕಳ್ಳನೇ ನನಗಿಂತ ಶ್ರೇಷ್ಠ**' ಎಂದು ನೀನು ಭಾವಿಸಿದರು.

*ಡಾ.ವಾಗೀಶ್ವರೀ ಶಿವರಾಮ ಅವರ '೧೦೮ ವಿವೇಕದೀಪಿನೀ – ಕಥಾಮಾಲಾ' ಪುಸ್ತಕದಿಂದ*